**ಶ್ರೀ ತಿಪ್ಪೇಸ್ವಾಮಿ:** ಮಾನ್ಯ ಅಧ್ಯಕ್ಷರೆ, ಇದೇ ಫಂಡ್‌ನಲ್ಲಿ ತೆಗೆದು ಹಾಕಿ ಸರಿ ಮಾಡಿಕೊಡಬೇಕು.

**ಅಧ್ಯಕ್ಷರು:** ಕಾರ್ಯಕ್ರಮಗಳನ್ನು ಸರಿ ಮಾಡಿ.

**ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ್:** ಇದು ಕೇಂದ್ರ ಸರ್ಕಾರದ ಹಣ, ಪೂಲ್ಡ್ ಅಮೌಂಟ್ ಅಲ್ಲ. ಬೇಕಾದರೆ ಮತ್ತೊಮ್ಮೆ ಇದನ್ನು ಪರಿಶೀಲನೆ ಮಾಡಿ ಸಚಿವರು ಹೇಳಲಿ.

**ಅಧ್ಯಕ್ಷರು:** ಕಾರ್ಯಕ್ರಮವನ್ನು ಸರಿ ಮಾಡಿ. ಈಗ ಪ್ರಶ್ನೋತ್ತರ ಸಮಯ ಮುಗಿದಿದೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು:**

**ಶ್ರೀ ಎಸ್.ಸುರೇಶ್ ಕುಮಾರ್:** ಮಾನ್ಯ ಅಧ್ಯಕ್ಷರೆ, ದಿನಾಂಕ: 09.07.2009 ರಂದು 01ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 34 ಪ್ರಶ್ನೆಗಳ ಪೈಕಿ 31 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು:** ಮಂಡಿಸಲಾಯಿತು.

**ಅಧ್ಯಕ್ಷರು:** ಈಗ ಪ್ರಶ್ನೋತ್ತರ ಮುಕ್ತಾಯವಾಗಿದೆ. ಈಗ 7.30 ಗಂಟೆಯಾಗಿದೆ. ಬಾಕಿ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

**ಶ್ರೀ ಹೆಚ್.ಡಿ.ರೇವಣ್ಣ:** ಶೂನ್ಯವೇಳೆ ತೆಗೆದುಕೊಳ್ಳಿ.

**ಶ್ರೀ ತಿಪ್ಪೆಸ್ವಾಮಿ:** ಸ್ವಾಮಿ ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

**ಅಧ್ಯಕ್ಷರು:** ಮಾನ್ಯ ಮಂತ್ರಿಗಳೆ, ಅದನ್ನು ಸರಿಮಾಡುತ್ತೇವೆಂದು ಹೇಳಿ. ತಾರತಮ್ಯವು ಆಗದಂತೆ ನೋಡಿಕೊಳ್ಳುತ್ತೇನೆಂದು ಹೇಳಿ. ಮಾನ್ಯ ರೇವಣ್ಣನವರೆ, ಈಗ ಶೂನ್ಯವೇಳೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ತಾವು ಮಾತನಾಡಿ.

## 5. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

ಅ) ವಿಷಯ: ಗುಲ್ಬರ್ಗ ಹಾಲು ಉತ್ಪಾದಕರ ಸಂಘಕ್ಕೆ ನಿರ್ದೇಶಕರ ನಾಮಕರಣದ ಬಗ್ಗೆ

**ಶ್ರೀ ಹೆಚ್.ಡಿ.ರೇವಣ್ಣ(ಹೊಳೆನರಸೀಪುರ):** ಮಾನ್ಯ ಅಧ್ಯಕ್ಷರೆ, ಮಾನ್ಯ ಗೋಪಾಲಕೃಷ್ಣರವರೆ ಒಂದು ನಿಮಿಷ ಕುಳಿತುಕೊಳ್ಳಿ.

**ಅಧ್ಯಕ್ಷರು:** ಮಾನ್ಯ ಸದಸ್ಯರುಗಳು ದಯಮಾಡಿ ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ,...

**ಅಧ್ಯಕ್ಷರು:** ಈಗ ಪ್ರಶ್ನೋತ್ತರವನ್ನು ಕ್ಲೋಸ್ ಮಾಡಿದ್ದೇನೆ. ದಯಮಾಡಿ ತಾವುಗಳು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಬೇಕು.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಮಂತ್ರಿಗಳೇ ಹೊರಟು ಹೋದರು.